## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಿನಾಂಕ: 30.04.2010 ರಂದು ಸಭೆಯಲ್ಲಿ ಮಂಡಿಸಲಾದ

## ನಿರ್ಣಯ

---

**ವಿಷಯದ ಸಂಖ್ಯೆ: 16/2010-11**

" ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಚುನಾಯಿತ ಪ್ರತಿನಿಧಿಗಳಿಲ್ಲದಿರುವಾಗ ಆಸ್ತಿ ತೆರಿಗೆಯಲ್ಲಿ ಶೇ.5ರಷ್ಟು ರಿಯಾಯಿತಿಗೆ ಕಾಲಮಿತಿಯನ್ನು ನಿಗಧಿಪಡಿಸಿ ಆಸ್ತಿ ತೆರಿಗೆಯನ್ನು ಪಾವತಿಸಲು ಕಾಲವಕಾಶ ನೀಡಲಾಗಿತ್ತು. ಈ ನಿಬಂಧನೆಯು 2008-2009ನೇ ಹಾಗೂ 2009-10ನೇ ಸಾಲಿಗೆ ಮಾತ್ರ ಸೀಮಿತವಾಗಿರುವುದು ಕಂಡುಬರುತ್ತದೆ. ಆದರೆ 2010-11ನೇ ಸಾಲಿನ ಚುನಾಯಿತ ಪ್ರತಿನಿಧಿಗಳ ಆಡಳಿತವು ಅಸ್ತಿತ್ವಕ್ಕೆ ಬಂದಿದ್ದು, ಆಸ್ತಿ ತೆರಿಗೆಯನ್ನು ಸಮರ್ಪಕವಾದ ರೀತಿಯಲ್ಲಿ ವಸೂಲಾತಿ ಮಾಡುವಲ್ಲಿ ಜನ ಪ್ರತಿನಿಧಿಗಳಾದ ನಮ್ಮಗಳ ಮೇಲೆ ಗುರುತರವಾದ ಜವಾಬ್ದಾರಿಯಿದ್ದು, ಈ ಬಗ್ಗೆ ಕಾಲಾವಕಾಶದ ಮಿತಿಯನ್ನು ತೆರಿಗೆದಾರರ ಹಿತಚಿಂತನೆಯನ್ನು ಹಾಗೂ ಪಾಲಿಕೆಯ ಆರ್ಥಿಕ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮೇ 30, 2010 ರವರೆವಿಗೂ ರಿಯಾಯಿತಿಯ ಆವಧಿಯನ್ನು ವಿಸ್ತರಿಸಿದಲ್ಲಿ ತೆರಿಗೆದಾರರು ಸ್ವಪ್ರೇರಣೆಯಿಂದ ತೆರಿಗೆ ಪಾವತಿಸಲು ಅನುವು ಮಾಡಿಕೊಡುವುದು ನಗರ ಪಾಲಿಕೆಯ ಕರ್ತವ್ಯವಾಗಿರುವ ಹಿನ್ನಲೆಯಲ್ಲಿ ಈ ಕೆಳಕಂಡ ನಿರ್ಣಯವನ್ನು ಕೈಗೊಳ್ಳಲಾಗಿದೆ.

ಶ್ರೀ. ಬಿ.ಎಸ್. ಸತ್ಯನಾರಾಯಣ ರವರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

" ಕೆ.ಎಂ.ಸಿ. ಕಾಯ್ದೆ 1976ರ ನಿಯಮ 108ಎ ಹಾಗೂ ಕಂಡಿಕೆ 4ರಲ್ಲಿನ ವಿವರಣೆಯಂತೆ 2010-2011ನೇ ಸಾಲಿನ ಆಸ್ತಿ ತೆರಿಗೆಯನ್ನು ದಿನಾಂಕ: 30-04-2010ರ ಮುಂಚೆ ಪಾವತಿಸುವ ಆಸ್ತಿಯ ಮಾಲೀಕರುಗಳಿಗೆ ಆಸ್ತಿ ತೆರಿಗೆಯಲ್ಲಿ ಶೇಕಡ 5 ರಷ್ಟು ರಿಯಾಯಿತಿಯನ್ನು ನೀಡಿದ್ದು, ಸಾರ್ವಜನಿಕರ ಹಾಗೂ ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಶೇ.5ರ ರಿಯಾಯಿತಿಯ ಅವಧಿಯನ್ನು ದಿನಾಂಕ:30-05-2010ರವರೆವಿಗೆ ವಿಸ್ತರಿಸುವಂತೆ ಹಾಗೂ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಕ್ರಮ ಕೈಗೊಳ್ಳಲು ಆಯುಕ್ತರವರಿಗೆ ಅಧಿಕಾರ ನೀಡಲು ಈ ಸಭೆಯ ಅನುಮೋದನೆ ಕೋರಿ ಮಂಡಿಸಿದೆ."

ಶ್ರೀ.ಪಿ.ಎಂ. ಸದಾಶಿವ ರವರು ಶ್ರೀ. ಬಿ.ಎಸ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯ ನಂತರ ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:-** " ಕೆ.ಎಂ.ಸಿ. ಕಾಯ್ದೆ 1976ರ ನಿಯಮ 108ಎ ಹಾಗೂ ಕಂಡಿಕೆ 4ರಲ್ಲಿನ ವಿವರಣೆಯಂತೆ 2010-2011ನೇ ಸಾಲಿನ ಆಸ್ತಿ ತೆರಿಗೆಯನ್ನು ದಿನಾಂಕ: 30-04-2010ರ ಮುಂಚೆ ಪಾವತಿಸುವ ಆಸ್ತಿಯ ಮಾಲೀಕರುಗಳಿಗೆ ಆಸ್ತಿ ತೆರಿಗೆಯಲ್ಲಿ ಶೇಕಡ 5 ರಷ್ಟು ರಿಯಾಯಿತಿಯನ್ನು ನೀಡಿದ್ದು, ಸಾರ್ವಜನಿಕರ ಹಾಗೂ ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಶೇ.5ರ ರಿಯಾಯಿತಿಯ ಅವಧಿಯನ್ನು ದಿನಾಂಕ:30-05-2010ರವರೆವಿಗೆ ವಿಸ್ತರಿಸುವಂತೆ ಹಾಗೂ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಕ್ರಮ ತೆಗೆದುಕೊಳ್ಳಲು ಆಯುಕ್ತರವರಿಗೆ ಅಧಿಕಾರ ನೀಡಲು ಈ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ. ನಟರಾಜ)

ಮಹಾಪೌರರು.